# ನಮ್ಮ ಕಾರ್ತೀಕನಿಗೊಂದು...

...47ನೇ ಪುಟದಿಂದ

ಬಿಸಿ ಚಹಾ ಕೊಡಲೇನು ಎಂದು ಹೇಳಿ ಅವನಿಗೆ ಗಾಜಿನ ಲೋಟದಲ್ಲಿ ಚಹಾ ತಂದಿತ್ತಳು. ಅಲ್ಲಿಯೇ ಮರದ ದಿಮ್ಮಿಯ ಮೇಲೆ ಕುಳಿತು ಚಹಾ ಹೀರ ಹತ್ತಿದ. ತುಂಬಾ ಸ್ವಾದಿಷ್ಟವಾಗಿದೆ ಎಂದು ಹೇಳಿದ. ಅದು ನಮ್ಮ ಊರಿನ ಚಹಾ ಪುಡಿ ಎಂದು ಹೇಳಿ ಅವಳು ಹೆಮ್ಮೆಯ ನಗೆ ನಕ್ಕಳು. ಚಹ ಕುಡಿದು ಹಣ ಕೊಡಲು ಪರ್ಸ್ ತೆಗೆದ. ಇದೇನು ಹೋಟೆಲ್ ಅಲ್ಲ. ನೀವು ನಮ್ಮ ಕ್ಯಾಂಪಿಗೆ ಬಂದಿರುವ ಗೆಸ್ಟ್ ಎಂದು ಇಂಗ್ಲಿಷಿನಲ್ಲಿ ಹೇಳಿ ಹಣ ತಿರಸ್ಕರಿಸಿದಳು. ನಿಮ್ಮ ತಂದೆಯನ್ನು ಕಾಣಲು ಮತ್ತೊಮ್ಮೆ ಬರುತ್ತೇನೆ. ಆಗಲೂ ಇಂತಹ ಉತ್ತಮ ಚಹ ಸಿಗಬಹುದೇ ಎಂದು ನಗುತ್ತಾ ಕೇಳಿದ. ನೀವು ಪರ್ಸ್ ತೆಗೆಯದಿದ್ದರೆ ಖಂಡಿತಾ ಸಿಗುತ್ತದೆ ಎಂದು ಅವಳೂ ನಕ್ಕಳು.



ಆಮೇಲೆ ಮತ್ತೆ ಒಂದೆರಡು ಸಾರಿ ತಂಡದ ಮೇಸ್ತ್ರಿ ಮಯಾದೂಂಗ್ ಎಂಗ್ಟಿ ಯನ್ನು ಹುಡುಕಿಕೊಂಡು ಬಂದ. ಮೇಸ್ತ್ರಿ ಇವನ ಜೊತೆ ಹೊನ್ನಳ್ಳಿಗೆ ಬಂದು ಇವನ ಪಾಲಿ ಹೌಸ್ ನಲ್ಲಿ ಹೂವು ಬೆಳೆಯುವುದನ್ನು ನೋಡಿ ಸಂತಸಗೊಂಡು ಬಂಗಾಳ ದಲ್ಲಿ ಡೈಸಿ, ಕ್ಯಾಲೆಂಡುಲಾ ಮುಂತಾದ ಇಂಗ್ಲೀಷ್ ಹೂವುಗಳನ್ನು ಬೆಳೆಯುವ ನಮ್ಮ ನುರಿತ ಕೆಲಸಗಾರರಿದ್ದಾರೆ. ಅವರಿಗೆ ಮನೆ, ನೀರು, ಕರೆಂಟಿನ ವ್ಯವಸ್ಥೆ ಮಾಡಿಕೊಟ್ಟರೆ ಖಂಡಿತವಾಗಿಯೂ ಉತ್ತಮ ಕೆಲಸಗಾರರನ್ನು ಬರುವ ಬೇಸಿಗೆ ಯಲ್ಲಿ ಊರಿಗೆ ಹೋದಾಗ ಕರೆ ತರುತ್ತೇನೆ ಎಂದು ಭರವಸೆ ಕೊಟ್ಟ, ಕಾರ್ತೀಕ ಅವರ ಕ್ಯಾಂಪಿಗೆ ಬಂದಾಗಲೆಲ್ಲಾ ಚಹಾ ಕುಡಿದು, ಅವಳ ಹತ್ತಿರ ಸ್ವಲ್ಪ ಹರಟೆ ಹೊಡೆದು ಹೋಗುತ್ತಿದ್ದ. ಅವಳ ಹೆಸರೇನೊ ಬೇರೆ. ಆದರೆ, ಎಲ್ಲರೂ ಅವಳನ್ನು ಮಿಮಿ ಎಂದೇ ಕರೆಯುತ್ತಿದ್ದರು. ಇಡೀ ಕ್ಯಾಂಪಿನಲ್ಲಿ ಅವಳೊಬ್ಬಳಿಗೇ ಇಂಗ್ಲಿಷ್ ಬರುತ್ತಿದ್ದುದು. ಇದಾದ ಎರಡು ಮೂರು ತಿಂಗಳ ನಂತರ ತಂದೆ ತಾಯಿಯರ ಜೊತೆ ಜೀಪಿನಲ್ಲಿ ಮಡಿಕೇರಿಗೆ ಹೋಗುವಾಗ, ದಾರಿಯಲ್ಲಿ ಅಸ್ಸಾಮಿಗಳ ಕ್ಯಾಂಪ್ ತೋರಿಸುತ್ತೇನೆ ಎಂದು ಜೀಪನ್ನು ಕ್ಯಾಂಪಿನ ಕಡೆ ತಿರುಗಿಸಿದ.

ಜೀಪು ಬಂದು ನಿಲ್ಲುತ್ತಿದ್ದಂತೆಯೇ, ಮಿಮಿ ಕ್ಯಾಂಪಿನ ಹಿಂಬದಿಯಿಂದ ಬಂದಳು. ನೀಲಿ ಬಣ್ಣದ ಜೀನ್ಸ್ ಪ್ಯಾಂಟು, ಗುಲಾಬಿ ಬಣ್ಣದ ಟೀ ಷರ್ಟ್ ಧರಿಸಿದ್ದಳು. ಅದೇ ಬಣ್ಣದ ಲಿಪ್‌ಸ್ಟಿಕ್, ಕತ್ತರಿಸಿದ ಕೂದಲನ್ನು ಹಿಂದಕ್ಕೆ ಬಾಚಿ ಪೋನಿಟೈಲಂತೆ ಕಟ್ಟಿಕೊಂಡಿದ್ದಳು. ಕಣ್ಣಿಗೆ ಕಾಡಿಗೆ ಹಚ್ಚಿಕೊಂಡಿದ್ದರಿಂದ ಅವಳ ಕಣ್ಣುಗಳು ಮತ್ತಷ್ಟು ಚಿಕ್ಕದಾಗಿರುವಂತೆ ತೋರುತ್ತಿತ್ತು. ಕಾರ್ತೀಕ ಇವಳು ಮೇಸ್ತ್ರಿಯ ಮಗಳು ಮಿಮಿ ಎಂದು ತಂದೆ ತಾಯಿಯರಿಗೆ ಪರಿಚಯಿಸಿದ. ಮಿಮಿ, ಕಾರ್ತೀಕನ ತಂದೆ ತಾಯಿಯರಿಗೆ ಕೈಮುಗಿದು, ಕುಳಿತುಕೊಳ್ಳಿ ಎಂದು ಕುರ್ಚಿಗಳನ್ನು ತಂದಿತ್ತಳು.

ಈ ಬಾರಿ ಚಹಾ ಬಿಸ್ಕೇಟುಗಳ ಜೊತೆ ಕಪ್ಪು ಸಾಸರಿನಲ್ಲಿ ಬಿಸಿ ಬಿಸಿ ಚಹಾ ಬಂದಿತು. ಇವರ ಹಳ್ಳಿಗೆ ಎಂಗ್ಟಿ ಬಂದಾಗ ಅವನ ಪರಿಚಯ ಕೃಷ್ಣಮೂರ್ತಿಗೆ ಆಗಿತ್ತು. ಮಿಮಿಯನ್ನು ನೋಡಿ ಇಂತಹ ಆಧುನಿಕ ಹುಡುಗಿ ಈ ಕೆಲಸಗಾರರ ಕ್ಯಾಂಪ್‌ನಲ್ಲಿ ಹೇಗೆ ಬಂದಳು ಎಂದು ಸುಶೀಲಮ್ಮ ಮನಸ್ಸಿನಲ್ಲಿಯೇ ಅಂದು ಕೊಂಡರು. ಕ್ಯಾಂಪಿನ ಬಗ್ಗೆ ಮತ್ತು ಅಲ್ಲಿನ ಕೆಲಸಗಾರರ ಬಗ್ಗೆ ಒಂದಿಷ್ಟು ಮಾತನಾಡಿ ಅವರು ಜೀಪು ಹತ್ತಿದರು. ಮಿಮಿ ಎಲ್ಲರಿಗೂ ಕೈ ಬೀಸಿದಳು. ಸ್ವಲ್ಪ ಹೊತ್ತು ಜೀಪು ಓಡಿಸಿದ ಮೇಲೆ ಕಾರ್ತೀಕ ಕೇಳಿದ. 'ಅಮ್ಮಾ ಹುಡುಗಿ ಹೇಗಿದ್ದಾಳೆ' ಕೃಷ್ಣಮೂರ್ತಿ ಮತ್ತು ಸುಶೀಲಮ್ಮ ಬೆಚ್ಚಿದರು.

'ಏನು ಹೇಳ್ತಿದ್ದೀಯ ಕಾರ್ತೀಕ' ಸ್ವಲ್ಪ ಚೇತರಿಸಿಕೊಂಡು ಸುಶೀಲಮ್ಮ ಕೇಳಿದರು. ಕಾರ್ತೀಕ ನಿಧಾನವಾಗಿಯೇ ಎಲ್ಲವನ್ನೂ ಅಂದರೆ ಮಿಮಿಯ ಹಿನ್ನೆಲೆಯನ್ನೆಲ್ಲಾ ವಿಷದವಾಗಿ ಹೇಳಿದ. ಅವಳ ತಂದೆ ಅಸ್ಸಾಮಿನ ಚಹಾ ತೋಟವೊಂದರಲ್ಲಿ ಮೇಸ್ತ್ರಿ. ತಾಯಿ ಸತ್ತು ಬಹಳ ವರ್ಷಗಳೇ ಆಗಿದೆ. ಚಹಾ ತೋಟಗಳಲ್ಲಿ ಹಿಂದಿನಂತೆ ಈಗ ಕೆಲಸ ಸಿಗುತ್ತಿಲ್ಲ. ಮತ್ತೆ ಕೂಲಿಯೂ ಬಹಳ ಕಡಿಮೆ. ಹಾಗಾಗಿ ಅಲ್ಲಿನ ಕೆಲಸಗಾರರೆಲ್ಲಾ ಬೇಕುಬೇಕಾದ ಕಡೆಗೆ ಕೆಲಸಕ್ಕಾಗಿ ವಲಸೆ ಹೋಗುತ್ತಾರೆ. ಇವಳ ಅಣ್ಣನೂ ಒಬ್ಬ ಮೇಸ್ತ್ರಿ. ಅವನ ಗುಂಪಿನ ಆಳುಗಳ ಜೊತೆ ಕೇರಳ ದಲ್ಲಿದ್ದಾನೆ. ಮಿಮಿ ಅವರ ಹಳ್ಳಿಯ ಹತ್ತಿರದ ಕಾನ್ವೆಂಟ್ ನಲ್ಲಿ ಓದಿ ನಂತರ, ಗೌಹಾತಿಯ ಕಾಲೇಜಿನಲ್ಲಿ ಬಿ.ಎ. ಮಾಡಿದ್ದಾಳೆ. ಅವಳ ಸಮುದಾಯದಲ್ಲಿ ಓದಿದವರು ಕಮ್ಮಿ. ಅವಳಿಗೆ ಹೆಚ್ಚು ಓದಿರುವ ಹುಡುಗನನ್ನು ಮದುವೆಯಾಗುವ ಆಸೆ. ಅದಕ್ಕಾಗಿ ಈವರೆಗೂ ಮದುವೆಯಾಗಿಲ್ಲ. ನೌಕರಿ ಮಾಡಿಕೊಂಡು ಅಸ್ಸಾಮಿನಲ್ಲೇ ಇರಬಹುದಿತ್ತು. ಆದರೆ ತಂದೆಯನ್ನು ಬಿಟ್ಟಿರಲಾರದೆ ಅವನು ಹೋಗುವ ಕಡೆಗೆಲ್ಲಾ ಹೋಗುತ್ತಾಳೆ.'

'ನಿನ್ನ ಸುಖ ಮತ್ತು ಸಂತೋಷವೆ ನಮಗೆ ಬೇಕಾಗಿರುವುದು. ಚೆನ್ನಾಗಿ ಯೋಚನೆ ಮಾಡಿದ್ದೀಯ ತಾನೆ? ನಿನಗೆ ಹಿತವೆನಿಸಿದರೆ ನಮಗೂ ಹಿತ' ಎಂದು ತಾಯಿ ಕಣ್ಣೊರೆಸಿಕೊಂಡಳು. ಎರಡು ದಿನಗಳ ನಂತರ ಎಂಗ್ಟಿಯನ್ನು ಮನೆಗೆ ಕರೆಸಿದರು. ಆತ ಕೃಷ್ಣಮೂರ್ತಿಗೆ ಮತ್ತು ಸುಶೀಲಮ್ಮನಿಗೆ ಕೈಮುಗಿಯುತ್ತಾ 'ತಾಯಿ ಇಲ್ಲದ ತಬ್ಬಲಿ. ನಾವು ಬಡವರಾದರೂ ಅಕ್ಕರೆಯಿಂದ ಸಾಕಿದ್ದೇನೆ. ಅವಳಿಗೇನು ಇಷ್ಟವೊ ಅದರಂತೆಯೇ ಆಗಲಿ' ಎಂದು ಕಣ್ಣೀರು ಹಾಕಿದ.

ಮದುವೆ ಶಾಸ್ತ್ರ ನಡೆದದ್ದು ಕಾಳೂರಿನ ಹತ್ತಿರದ 'ಪಶುಪತಿ'ದೇವಸ್ಥಾನದಲ್ಲಿ. ಆ ಪುರಾತನ ದೇವಸ್ಥಾನದಲ್ಲಿ ಅರ್ಚಕರಾದ ವೃದ್ಧ ನಾಗಪ್ಪ ಶಾಸ್ತ್ರಿಗಳು ಸಣ್ಣದಾಗಿ, ಚೊಕ್ಕವಾಗಿ ಮದುವೆಯ ಶಾಸ್ತ್ರ ಮುಗಿಸಿ, ತಾಳಿ ಕಟ್ಟಿಸಿದರು.

ಗಿಣಿ ಹಸಿರು ಬಣ್ಣದ ಮೈಸೂರು ಸಿಲ್ಕ್ ಸೀರೆಯಲ್ಲಿ ನಿನ್ನ ಸೊಸೆ ಎಷ್ಟು ಚೆನ್ನಾಗಿ ಕಾಣುತ್ತಿದ್ದಾಳೆ ಗೊತ್ತಾ ಕೈ ತೊಳೆದುಕೊಂಡು ಮುಟ್ಟಬೇಕು ನಿನ್ನ ಸೊಸೆಯನ್ನ ಎನ್ನುವ ಪ್ರಶಂಸೆ ಒಂದು ಕಡೆ ಬಂದರೆ, ಊಟವಾದ ಮೇಲೆ ಎಲ್ಲರೂ ಬಸ್ಸು, ಕಾರು ಹತ್ತುವ ಗಡಿಬಿಡಿಯಲ್ಲಿ ಸುಶೀಲಮ್ಮನಿಗೆ ಯಾರ ಮಾತೋ ಕಿವಿಗೆ ಬಿತ್ತು. 'ಅಲ್ಲಾ ಇವರು ಬ್ರಾಹ್ಮಣರು ಅಂತಾ ಹೇಳ್ಕೊತಾರೆ. ಆದರೆ ದನದ ಮಾಂಸ ತಿನ್ನುವ ಹುಡುಗಿಯನ್ನು ಮನೆಗೆ ಸೊಸೆಯಾಗಿ ತಂದ್ಕೊಳ್ತಾರಲ್ಲಾ, ಎಂತಹ ಅನಾಚಾರ..'

'ಈ ವಯಸ್ಸಾದ ಜೋಯಿಸರಿಗೆ ಏನು ಕೇಡು ಬಂತು. ಆಸೆಗೆ ಏನು ಬೇಕಾದರೂ ಮಾಡುತ್ತಾರೆ. ಎಲ್ಲದಕ್ಕೂ ಸೈ. ಅದರಲ್ಲೂ ದೇವಸ್ಥಾನದ ಅಂಗಳದಲ್ಲೇ ಇಂತಹ ಧರ್ಮಬಾಹಿರ ಮದುವೆ ಮಾಡಿಸುತ್ತಾರೆ. ಏನು ಕಾಲ ಬಂತೋ?' ಎಂದವರು ಇನ್ನೊಬ್ಬರು.

ತೋಟದ ಮನೆಯಿಂದ ಸಂಜೆ ಎಲ್ಲರೂ ಹೊರಟಾದ ಮೇಲೆ ಮೆಲ್ಲಗೆ, ಕೃಷ್ಣಮೂರ್ತಿ ಮತ್ತು ಬಸವರಾಜಯ್ಯನವರ ಹತ್ತಿರ ಸುಶೀಲಮ್ಮ ನಡೆದ ಎಲ್ಲವನ್ನೂ ಹೇಳಿಕೊಂಡು ಜನ ಹ್ಯಾಗೆ ಮಾತನಾಡಿಕೊಳ್ತಾರೆ ನೋಡಿ ಎಂದು ಮತ್ತೊಮ್ಮೆ ಕಣ್ಣೀರಿಟ್ಟರು. ನೀವು ಬೇಜಾರು ಮಾಡ್ಕೊಳ್ಬೊ ಅವಶ್ಯಕತೆಯಿಲ್ಲ ಸುಶೀಲಮ್ಮ, ಮದುವೆ ಗಲಾಟೆಯೆಲ್ಲಾ ಕಳೀಲಿ. ನಾಲ್ಕೈದು ದಿನ ಬಿಟ್ಟು ಬರುತ್ತೇನೆ. ಅವತ್ತು ನಿಮ್ಮ ಹತ್ರ ನಿಧಾನವಾಗಿ ಮಾತನಾಡುತ್ತೇನೆ ಎಂದು ಸಮಾಧಾನಪಡಿಸಿ ಹೊರಟರು.

ಬಸವರಾಜಯ್ಯ ಹೇಳಿದ ಹಾಗೆ, ನಾಲ್ಕೈದು ದಿನದ ನಂತರ ಮನೆಗೆ ಬಂದರು. ಮಿಮಿ ಗೆಲುವಾಗಿ ಓಡಾಡಿಕೊಂಡಿರುವುದನ್ನು ನೋಡಿದರು. ಕಾಫಿಯನ್ನು ಗುಟುಕರಿಸುತ್ತಾ, ಸುಶೀಲಮ್ಮನೊಂದಿಗೆ ಮಾತಿಗಿಳಿದರು. ಕೃಷ್ಣಮೂರ್ತಿ ನನ್ನ ಹೆಂಡತಿಗೆ ಇನ್ನೂ ಮನಸ್ಸಿಗೆ ಸಮಾಧಾನವಿಲ್ಲ. ನೀನೇ ಸ್ವಲ್ಪ ಸಮಾಧಾನ ಹೇಳು ಬಸವರಾಜಯ್ಯ ಎಂದರು.

ಬಸವರಾಜಯ್ಯ ಕಾಫಿಯನ್ನು ನಿಧಾನವಾಗಿ ಕುಡಿದು, ಲೋಟವನ್ನು ಕೆಳಗಿಡುತ್ತಾ ಕೇಳಿದರು. ಕಾರ್ತೀಕ ನೀನು ನಿನ್ನ ಹೆಂಡತಿಯೂ ಬನ್ರಪ್ಪ. ಇದು ಎಲ್ಲರಿಗೂ ಸಂಬಂಧಿಸಿದ್ದು ಎಂದು ಕರೆದರು. ಎಲ್ಲರನ್ನೂ ಸಂಬೋಧಿಸುತ್ತಾ, ನೀವೆಲ್ಲರೂ ಭಗವದ್ಗೀತೆಯನ್ನು ಓದಿರಬೇಕಲ್ಲವೆ?

ಹೌದು ಸ್ವಲ್ಪ ಮಟ್ಟಿಗೆ ಎಂದರು ಕೃಷ್ಣಮೂರ್ತಿ. ಯುದ್ಧಕ್ಕೆ ಎಲ್ಲರೂ ಸಿದ್ಧರಾಗಿ ನಿಂತಿರುವಾಗ, ಅರ್ಜುನ ಯುದ್ಧ ಮಾಡುವುದಕ್ಕೆ ಹಿಂಜರಿಯುತ್ತಾನೆ ಅಲ್ಲವೆ?

ತಾನು ಯಾಕೆ ಯುದ್ಧ ಮಾಡಲಾರೆ ಎಂದು ಅರ್ಜುನ ಹಲವಾರು ಕಾರಣಗಳನ್ನು ಕೃಷ್ಣನಿಗೆ ಕೊಡುತ್ತಾನೆ. ಅರ್ಜುನನ ಪ್ರಕಾರ ಮುಖ್ಯವಾದ ಕಾರಣವೆಂದರೆ, ಇಂತಹ ಮಹಾಯುದ್ಧದಲ್ಲಿ ಯಾರು ಗೆದ್ದರೂ, ಯಾರು ಸೋತರೂ ಲಕ್ಷಾಂತರ ಯೋಧರು ಮಡಿಯುತ್ತಾರೆ. ಯುದ್ಧದ ದೆಸೆಯಿಂದ ಕುಲಗಳೆಲ್ಲಾ ನಾಶವಾಗಿ ಲಕ್ಷಾಂತರ ಮಡಿದ ಯೋಧರ ವಿಧವೆಯರು, ಗಂಡು ದಿಕ್ಕಿಲ್ಲದ ಹೆಂಗಸರು, ಚಂಚಲರಾಗಿ ವರ್ಣಸಂಕರಕ್ಕೆ ಕಾರಣರಾಗುತ್ತಾರೆ. ವರ್ಣ ಸಂಕರವಾಗುವುದು ಅಧರ್ಮಕ್ಕೆ ದಾರಿ ಮಾಡಿಕೊಡುತ್ತೆ, ಸಮಾಜಕ್ಕೆ ಇದು ಒಳ್ಳೆಯದಲ್ಲ. ಆದ್ದರಿಂದ ನಾನು ಯುದ್ಧ ಮಾಡುವುದಿಲ್ಲ ಎನ್ನುತ್ತಾನೆ ಅರ್ಜುನ.